‘ನಿನ್ನ ಇಶ್ಯು ಯಾವುದಕ್ಕೆ?’ ಅಂತ ಕೇಳುವಾಗ ಉದ್ವಿಗ್ನನಾದ ಮೂರ್ತಿ. ‘ನೀನೊಬ್ಬ ಹಿಂದು ಬ್ರಾಹ್ಮಿನ್, ನಾನು ಕ್ರಿಶ್ಚಿಯನ್. ಚರ್ಚ್ ಮದುವೆಯಲ್ಲದೆ ನನ್ನ ತಾಯಿ ಯಾವುದನ್ನೂ ಒಪ್ಪಲಾರಳು. ನನ್ನನ್ನು ಮದ್ವೆ ಮಾಡಿಕೊಳ್ಳಕ್ಕೆ ನೀನು ಕನ್ವರ್ಟ್ ಆಗಬೇಕಾಗುತ್ತಲ್ಲ’ ಎಂದು ಅವನ ಮುಖವನ್ನೇ ನೋಡಿದಳು. ಅರಳು ಹುರಿದಷ್ಟು ತ್ವರೆಯಿಂದ, ‘ಅದು ಆ ಮೇಲಿನ ಮಾತು. ನಿಂಗೆ ನನ್ನ ಬಗ್ಗೆ ಅಂಥ ಭಾವನೆಗಳಿವೆಯ?’ ಅಂತ ಕೇಳಿದ. ಅವಳು ನಗುತ್ತಾ, ‘ಇಲ್ಲದಿದ್ರೆ ಸಡನ್ನಾಗಿ ಇಲ್ಲಿಗೆ ಬಂದು ನಿನ್ನ ಕರೆಸಿ ಮಾತಾಡುವುದೇನಿತ್ತು ನನಗೆ?’ ಅಂದಳು. ಧಿಗ್ಗನೆ ಎದ್ದು ನಿಲ್ಲುತ್ತಾ ಕಂಪಿಸುತ್ತಿದ್ದ ದನಿಯಲ್ಲಿ, ‘ರೋಸ್... ನಿಜ ಹೇಳ್ತಿದೀಯ! ನಂಗೆ ನಂಬಕ್ಕೇ ಆಗ್ತಿಲ್ಲ. ನನ್ನ ಹತ್ತನೇ ವಯಸ್ಸಿಂದ ನಿನ್ನನ್ನಲ್ಲದೆ ಇನ್ನೊಂದು ಹೆಣ್ಣಿನ ಕನಸು ಕಂಡಿಲ್ಲ ನಾನು. ನನ್ನ ಒಂದೊಂದು ಉಸಿರು ತಗೊಳ್ಳುವಾಗ್ಲು ನೀನೇ ಇರ್ತೀಯ. ಆದ್ರೆ... ನನ್ನನ್ನು ನೀನು ಒಪ್ಕೊತಿಯೋ ಇಲ್ವೋ ಅಂತ ಅನುಮಾನಿಸಿದೆ. ನಾನು ನಿಂಗೆ ಲಾಯಕ್ಕಾದವನಲ್ಲ ಅಂತ ಅನ್ನಿಸ್ತಿತ್ತು. ನಂಗೆ ಈ ಜಾತಿ ಧರ್ಮಗಳಲ್ಲಿ ನಂಬಿಕೆ ಇಲ್ಲ. ನಿನ್ನನ್ನು ಮದ್ವೆ ಮಾಡ್ಕೊಳೋ ಸಲುವಾಗಿ ಹೇಳ್ತಿದೀನಂದುಕೋಬೇಡ. ನಿನಗಾಗಿ ನಾನು ನಿಮ್ಮ ಧರ್ಮಕ್ಕೆ ಬರ್ತೀನಿ. ಆದ್ರೆ ನಂಗೆ ಯಾವುದೇ ಧರ್ಮದ ಅಗತ್ಯವಿಲ್ಲ. ಕೇವಲ ನಿನಗಾಗಿ ಮಾತ್ರ ಬರಬಲ್ಲೆ. ನಾವಿಬ್ಬರು ಸಂತೋಷವಾಗಿ ಬದುಕಕ್ಕೆ ಪ್ರೀತಿ ಮಾತ್ರ ಸಾಕೆನಿಸುತ್ತೆ. ನೋ ರಿಲೀಜಿಯನ್ ನೀಡೆಡ್ ಫಾರ್ ದಟ್’ ಎಂದ. ಇಷ್ಟು ಮಾತಾಡುವಾಗ ಅವನ ಇಡೀ ಶರೀರವೇ ಕಂಪನಕೊಳಕ್ಕಾಗಿತ್ತು. ಕೂತಿದ್ದವಳು ಮೇಲೆದ್ದು ತಟಕ್ಕನೆ ಅವನನ್ನು ಆಲಂಗಿಸಿ ಕದಪಿನ ಮೇಲೊಂದು ಮುದ್ದಿಟ್ಟು, ‘ಬೈ, ನಾಳೆ ಅಜ್ಜಿಯ ಜೊತೆ ಮಾತಾಡ್ತೀನಿ, ನಾಳೆ ಸಂಜೆ ಊರಿಗೆ ಹೊರಡಬೇಕು. ಅಲ್ಲಿ ಅಪ್ಪಅಮ್ಮನ ಜೊತೆ ಮಾತಾಡಿ ಕನ್ವಿನ್ಸ್ ಮಾಡ್ತೀನಿ. ನಿಮ್ಮನೆಯಲ್ಲಿ ಹೇಗೆ? ಒಪ್ಕೊತಾರ?’ ಅಂತ ಕೇಳಿದ್ದಕ್ಕೆ, ‘ನಂಗು ಒಪ್ಪಿಸಕ್ಕೆ ಹದಿನೈದು ದಿನ ಸಮಯ ಬೇಕು. ಒಪ್ಪಿದರೆ ಸರಿ, ಇಲ್ಲದಿದ್ರೆ ನಾನು ಕೇರ್ ಮಾಡಲ್ಲ’ ಅಂದು ನಕ್ಕ. ಅವನು ಹೋದ ಮೇಲೆ ಬಾಗಿಲು ಹಾಕಿ ಅಲ್ಲೇ ದಿವಾನದಲ್ಲಿ ಮಲಗಿ ಇಡೀ ರಾತ್ರಿ ನಿದ್ದೆ ಇಲ್ಲದೆ ಹೊರಳಾಡುತ್ತಾ ಕಳೆದಳು.

ವರಾಂಡದ ಗ್ರಿಲ್‌ಗಳಿಂದ ರಾಚುತ್ತಿದ್ದ ಬಿಸಿಲು ಮುಖಕ್ಕೆ ಚುಚ್ಚಿದಾಗ ಎದ್ದು ಒಳ ಹೋದಳು. ಟೀ ಕಪ್ ಕೈಗಿಡುತ್ತಾ ಎಲ್ಲಿ, ‘ರಾತ್ರಿ ಅಲ್ಲೇ ಮಲಗಿಬಿಟ್ಯಲ್ಲ... ರೂಮಲ್ಲಿ ಮಲಗಿಲ್ಲ... ಯಾಕೆ ನಿದ್ರೆ ಬರಲಿಲ್ವ? ಕಣ್ಣೆಲ್ಲ ಕೆಂಪಾಗಿದೆ’ ಅಂದರು. ‘ಅಜ್ಜೀ...’ ಅಂದಳು. ಅಕ್ಕರೆಯಿಂದ ಪಕ್ಕ ನಿಂತು ಅವಳ ಬೆನ್ನ ಮೇಲೆ ಹಸ್ತವಾಡಿಸಿ, ‘ನಿನ್ನೆಯಿಂದ ಏನೋ ಹೇಳಬೇಕಂತಿದೀಯ... ಅದೇನು ಹೇಳು’ ಅಂದರು. ‘ನಾನು ಮೂರ್ತಿಯನ್ನು ಮದುವೆ ಮಾಡಿಕೊಳ್ಳಲ?’ ಅಂತ ಕೇಳಿದಳು. ಅಜ್ಜಿ ಒಂದು ನಿಮಿಷ ಗಂಭೀರವಾಗಿಬಿಟ್ಟರು. ‘ಅದು... ನಿಮ್ಮಮ್ಮನಿಗೆ ಗೊತ್ತಾ?’ ಅಂತ ಕೇಳಿದಳು. ‘ಇಲ್ಲ’ ಅಂದವಳನ್ನು ತಬ್ಬುತ್ತಾ, ‘ಅಯ್ಯೋ ನನ್ನ ಕಂದ... ಅಮ್ಮನಿಗೆ ಹೇಳುವ ಮೊದಲು ನನಗೆ ಹೇಳ್ತಿದೀಯ, ನೀನು ಎಲ್ಲಾ ನಿನ್ನತ್ತೆಯ ಹಾಗೇನೆ. ಅವಳೂ ನಿನ್ನ ವಯಸ್ಸಿನಲ್ಲಿ ಹಿಂದೂ ಹುಡುಗನನ್ನು ಮದುವೆಯಾಗ್ತೀನಂದಳು. ಮನೆಯಲ್ಲಿ ರಂಪರಾದ್ಧಾಂತವಾಯಿತು. ನಿನ್ನ ತಾತ ಒಪ್ಪಲೇ ಇಲ್ಲ. ನಿನ್ನಪ್ಪ, ನಾನು ಮಾತ್ರ ಹುಂ ಅಂದಿದ್ದೆವು. ಮಿಕ್ಕವರೆಲ್ಲ ಗಲಾಟೆಯೆಬ್ಬಿಸಿದರು. ಅವಳು ಓಡಿಹೋಗಿ ಮದ್ವೆಯಾಗ್ತಾಳಂತ ಹೆದರಿ ನಿನ್ನ ತಾತ ಅವಳನ್ನು ರೂಮಲ್ಲಿ ಕೂಡಿಟ್ಟರು. ಎರಡು ದಿನ ಅಂಗಲಾಚಿದಳು. ಮೂರನೇ ದಿನ ರೂಮಲ್ಲಿ ನೇಣುಹಾಕ್ಕೊಂಡುಬಿಟ್ಟಳು’ ಹೇಳುತ್ತಾ ಅತ್ತರು. ಒಂದು ನಿಮಿಷ ಸಾವರಿಸಿ ಕಣ್ಣೊರೆಸಿಕೊಂಡು, ‘ಆಗಲಿ ರೋಸಿ, ಸಂತೋಷವಾಗಿ ಅವನನ್ನೇ ಮಾಡಿಕೋ. ನಾವು ಕಂಡು ಕೇಳಿರುವ ಹುಡುಗ, ಓದಿದ್ದಾನೆ, ಸಂಪಾದಿಸುತ್ತಾನೆ. ಎಲ್ಲಕ್ಕಿಂತ ಖುಷಿ ಅಂದ್ರೆ ನೀನು ನಮ್ಮ ಪಕ್ಕದ ಮನೆಗೇ ಬರ್ತೀಯಲ್ಲ’ ಎನ್ನುತ್ತಾ ಸಂಭ್ರಮಿಸಿದರು. ನಾನು ನಿನ್ನಪ್ಪ ಅಮ್ಮನೊಡನೆ ಮಾತಾಡಿ ಒಪ್ಪಿಸ್ತೀನಿ. ಜೀಸಸ್ ಎಲ್ಲ ಒಳ್ಳೇದು ಮಾಡ್ತಾನೆ. ನಮ್ಮ ಮನೇಲಿ ಆಗಿರೋ ಒಂದು ಅನಾಹುತ ಸಾಕು. ಆ ಕಾರಣಕ್ಕೆ ಅಂತಹ